# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ಗುಬ್ಬಿ

**ದಿನಾಂಕಃ 19.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | ಎಂ ಜಿ ರೇಣುಕಯ್ಯ ಬಿನ್ ಲೇ. ಗುರುದೇವರು |
| ವರ್ಷ | 70 ವರ್ಷ |
| ಕೆಲಸ | ವ್ಯವಸಾಯ |
| ವಾಸ್ತವ್ಯ | ಮೂಗನಾಯಕನ ಕೋಟೆ |
| | **ಸತ್ಯ ಪ್ರತಿಜ್ಞೆಯ ಮೇರೆಗೆ** |

## ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಾದ ಶ್ರೀ ಹೆಚ್ ಎಲ್ ಅರ್ ಎಸ್ ರವರಿಂದ

ದಿಃ 09.02.1978 ರಂದು ನನ್ನ ಹಾಗೂ ನನ್ನ ಸಹೋದರರ ನಡುವೆ ಆದ ವಿಭಾಗ ಪತ್ರದಂತೆ ನಮ್ಮ ನಮ್ಮ ಹೆಸರಿಗೆ ಖಾತೆ ಪಹಣಿ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು 7 ನೇ ತರಗತಿವರೆಗೆ ಓದಿದ್ದೇನೆ. ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುತ್ತದೆ. ಎಂ ಅರ್ 10/2008-09 ರಂತೆ ನನ್ನ ಹೆಸರಿಗೆ ಸ.ನಂ.95/01 1 ಎಕರೆ 25 ಗುಂಟೆ ಜಮೀನು ಖಾತೆ ಪಹಣಿ ಆಗಿದೆ ಎಂದರೆ ಸರಿ. ಆದೇ ನನ್ನ ಸಹೋದದರಿಗೂ ಕೂಡ ಇದೇ ಸ.ನಂಬರ್ ತಲಾ 1 ಎಕರೆ 37 ಗುಂಟೆಗೆ ಖಾತೆ ಪಹಣಿ ಆಗಿದೆ ಎಂದರೆ ಸರಿ. ನನ್ನ ಅಣ್ಣ ಎಂ ಜಿ ಸಿದ್ದರೇವಣ್ಣರಾಧ್ಯ ರವರು ಅವರ ಭಾಗಕ್ಕೆ ಬಂದಿದ್ದ 1 ಎಕರೆ 37 ಗುಂಟೆ ಜಮೀನು ಬಹಳ ಹಿಂದೆಯೇ ಮಾರಾಟ ಮಾಡಿಕೊಂಡು ಹೋಗಿದ್ದಾರೆ ಎಂದರೆ ಸರಿ. ವಾದ ಪತ್ರದಲ್ಲಿ ಬರೆದಿರುವ ವಿಚಾರವನ್ನು ಹಾಗೂ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ನನ್ನ ಭಾಗಕ್ಕೆ ದಾವಾಸ.ನಂಬರ್ ನಲ್ಲಿ ಬಂದಿದ್ದ 1 ಎಕರೆ 37 ಗುಂಟೆ ಪೈಕಿ 12 ಗುಂಟೆ ಜಮೀನನ್ನು ಹೇಮಾವತಿ ಚಾನಲ್ ಗಾಗಿ ಸರ್ಕಾರಕ್ಕೆ ಬಿಟ್ಟುಕೊಟ್ಟಿರುತ್ತೇನೆ ಇನ್ನು ಉಳಿದ 1 ಎಕರೆ 25 ಗುಂಟೆ ಜಮೀನು ನನ್ನ ಹೆಸರಿಗೆ ಖಾತೆ ಪಹಣಿ ಆಗಿದೆ. ನಾನು 1 ಎಕರೆ 37 ಗುಂಟೆ ಪೂರ್ತಿ ಜಮೀನಿನಲ್ಲಿ ಸ್ವಾಧೀನದಲ್ಲಿ ಇದ್ದೇನೆ ಎಂದು ನನ್ನ ವಾದ ಪತ್ರದಲ್ಲಿ ಹೇಳಿದ್ದೇನೆ ಎಂದರೆ ಸರಿಯಲ್ಲ. ದಿಃ

09.02.1978 ರ ಮೂಲ ಪಾಲು ಪಟ್ಟಿ ನನ್ನ ಬಳಿ ಇದೆ ಎಂದರೆ ಸರಿ. ಸದರಿ ಪಾಲು ಪಟ್ಟಿಯಲ್ಲಿ ನಮೂದಾಗಿರುವ ವಿಚಾರಗಳೆಲ್ಲ ಸತ್ಯವಾಗಿದೆ ಎಂದರೆ ಸರಿ. ಸದರಿ ಮೂಲ ಪಾಲು ಪಟ್ಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಏನೂ ತೊಂದರೆ ಇಲ್ಲ ಎಂದರೆ ಸರಿ. ಪ್ರತಿವಾದಿಯ ಭಾಗಕ್ಕೆ ಬಂದಿದ್ದ ಜಮೀನನ ಪೂರ್ವಕ್ಕೆ ಓಡಾಡಲು ಬಂಡಿದಾರಿ ಬಿಟ್ಟಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಭಾಗಕ್ಕೆ ಬಂದಿದ್ದ ಜಮೀನಲ್ಲಿ ಪೂರ್ವ ದಿಕ್ಕಿನಲ್ಲಿ ನಾನು ಓಡಾಡಲು ಬಂಡಿದಾರಿ ಬಿಟ್ಟುಕೊಂಡಿದ್ದೇನೆ ಎನ್ನುತ್ತಾರೆ. ಸದರಿ ವಿಭಾಗದಂತೆ ದಾವಾಸ.ನಂಬರ್ ನ ಉತ್ತರ ಭಾಗದ ಜಮೀನು ನನ್ನ ಹಿಸ್ಸೆಗೆ ಬಂದಿದ್ದು ಎಂದರೆ ಸರಿ. ನನ್ನ ಜಮೀನಿನ ದಕ್ಷಿಣಕ್ಕೆ ಪ್ರತಿವಾದಿಯ ಹಿಸ್ಸೆಯ ಜಮೀನು ಬಂದ ಎಂದರೆ ಸರಿ. ಪ್ರತಿವಾದಿಯ ಭಾಗಕ್ಕೆ ಬಂದ ಜಮೀನಿನ ದಕ್ಷಿಣಕ್ಕೆ ನನ್ನ ಅಣ್ಣ ಎಂ ಜಿ ಸಿದ್ದರೇವಣ್ಣರಾಧ್ಯ ರವರ ಭಾಗದ ಜಮೀನು ಬಂತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರತಿವಾದಿಯ ಜಮೀನಿನ ಪಶ್ಚಿಮಕ್ಕೆ ನನ್ನ ಅಣ್ಣನಿಗೆ ಹಿಸ್ಸೆ ಭಾಗಕ್ಕೆ ಬಂದಿತ್ತು ಎನುತ್ತಾರೆ. ಪ್ರತಿವಾದಿ ಹಿಸ್ಸಾ ಜಮೀನಿನ ದಕ್ಷಿಣದಿಂದ ಸರ್ಕಾರಿ ರಸ್ತೆ ಪ್ರತಿವಾದಿ ಜಮೀನಿಗೆ ಬರುತ್ತದೆ ಎಂದರೆ ಸರಿ. ಸದರಿ ರಸ್ತೆ ಪ್ರತಿವಾದಿ ಜಮೀನಿನ ಪೂರ್ವ ದಿಕ್ಕಿನ ವರೆಗೂ ಬಂದು ಅದರಲ್ಲಿ ಸದರಿ ಪಾಲು ಪಟ್ಟಿಯಂತೆ ಬಿಟ್ಟಿರುವ ಬಂಡಿದಾರಿಯಿಂದ ನಾನು ನನ್ನ ಜಮೀನಿಗೆ ಹೋಗಬೇಕು ಎಂದರೆ ಸರಿ. ಮೇಲೆ ಹೇಳಿದ ಬಂಡಿದಾರಿಯಿಂದಲೇ ಪ್ರತಿವಾದಿ ತನ್ನ ಜಮೀನಿನ ಪೂರ್ವ ದಿಕ್ಕಿಗೆ ಹೋಗಬೇಕು ಎಂದರೆ ಸರಿಯಲ್ಲ. ಪ್ರತಿವಾದಿ ತನ್ನ ಕುಟುಂಬದ ಅವ್ಯಕತೆಗೆಂದು ಹೇಳಿ ಅವನ ಹಿಸ್ಸೆ ಗೆ ಬಂದಿದ್ದ ದಾವಾಸ,ನಂ.1 ಎಕರೆ 37 ಗುಂಟೆ ಪೈಕಿ 29 ವರೆ ಗುಂಟೆ ಜಮೀನನ್ನು ದಿಃ 07.06.2004 ರಂದು ಸಿದ್ದರಾಮಯ್ಯ ಬಿನ್ ಸಿದ್ದನಂಜಯ್ಯ ಎನ್ನುವವರಿಗೆ ನಾನೇ ಹಾಜರುಪಡಿಸಿರುವ ನಿಪಿ.5 ಕ್ರಯ ಪತ್ರದ ದಾಖಲೆಯಂತೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಪಿ.5 ದಾಖಲೆಯನ್ನು ನಾನು ಓದಿ ತಿಳಿದುಕೊಂಡಿಲ್ಲ ಎಂದರೆ ಸರಿ. ಹಾಗದರೇ ನೀವು ನಿಪಿ.5 ದಾಖಲೆಯನ್ನು ಈ ದಾವೆಗೆ ಯಾವ ಕಾರಣಕ್ಕೆ ಹಾಜರುಪಡಿಸಿದ್ದಿರಾ ಎಂದರೆ ಸಾಕ್ಷಿಯು ವಿಭಾಗವಾದ ಮೇಲೆ ಪ್ರತಿವಾದಿ ಅವರ ಭಾಗಕ್ಕೆ ಬಂದ ಜಮೀನನ್ನು ಸಿದ್ದರಾಮಯ್ಯರವರಿಗೆ ಮಾರಾಟ ಮಾಡಿದ್ದಾರೆ ಎಂದು ಹೇಳಲು ನಾನು ಈ ದಾಖಲೆಯನ್ನು ಹಾಜರುಡಿಸಿದ್ದೇನೆ ಎಂದು ಉತ್ತರಿಸುತ್ತಾರೆ. ನಿಪಿ.5 ದಾಖಲೆಯನ್ನು ನಾನು ದಿಃ 20.06.23 ರಂದು ಸಬ್ ರಿಜಿಸ್ಟರ್ ಗುಬ್ಬಿ ರವರಿಂದ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ನಿಪಿ.5 ರಲ್ಲಿರುವ ವಿಚಾರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ನಿಪಿ.5 ರಲ್ಲಿ ಯಾರು ಯಾರಿಗೆ ಮಾರಾಟ ಮಾಡುತ್ತಿದ್ದಾರೆ, ಎನ್ನುವ ವಿಚಾರ, ಅರದಲ್ಲಿ ನಮೂದು ಮಾಡಿರುವ ಸ.ನಂಬರ್,

ವಿಸ್ತೀರ್ಣ, ಚಕ್ಕುಬಂದಿ ಎಲ್ಲಾ ಸರಿ ಇದೆ ಎಂದರೆ ಸಾಕ್ಷಿ ಹೌದು ಸರಿಯಿದೆ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಪ್ರತಿವಾದಿ 29 ವರೆ ಗುಂಟೆ ಜಮೀನನ್ನು ಮಾರಾಟ ಮಾಡುವ ಮೊದಲು ಹದ್ದುಬಸ್ತು ಮಾಡಿಸಿ, ದುರಸ್ತು ಮಾಡಿಸಿ ಸರ್ವೆ ಸ್ಕೆಚ್ ಮಾಡಿಸಿ ಮಾರಾಟ ಮಾಡಬೇಕಾಗಿತ್ತು ಆದರೆ ಆ ರೀತಿ ಮಾಡದೇ ಪ್ರತಿವಾದಿ ಅವನ ಭಾಗಕ್ಕೆ ಬಂದಿದ್ದ 1 ಎಕರೆ 37 ಗುಂಟೆ ಜಮೀನು ಹಾಗೂ ನನ್ನ ಭಾಗಕ್ಕೆ ಬಂದಿದ್ದ 1 ಎಕರೆ 37 ಗುಂಟೆ ಜಮೀನನ್ನು ಸೇರಿ ಮಾರಾಟ ಮಾಡಿದ್ದಾರೆ ಎನ್ನುತ್ತಾರೆ. ನನ್ನ ಭಾಗಕ್ಕೆ 1 ಎಕರೆ 37 ಗುಂಟೆ ಜಮೀನಿನಲ್ಲಿ ಪ್ರತಿವಾದಿ ಮಾರಾಟ ಮಾಡಿಲ್ಲ ಎಂದರೆ ಸರಿ. ಸಿದ್ದರಾಮಯ್ಯರವರಿಗೆ ಪ್ರತಿವಾದಿ ಮಾರಾಟ ಮಾಡಿದ್ದ 29 ವರೆ ಗುಂಟೆ ಜಮೀನು ಈಗ ಸ.ನಂ.95/3 ಎಂದು ಆಗಿದೆ ಎಂದರೆ ಸರಿಯಲ್ಲ. ನಾನೇ ಹಾಜರುಪಡಿಸಿರುವ ನಿಪಿ.4 ದಾಖಲೆಯಂತೆ ಸದರಿ ಸಿದ್ದರಾಮಯ್ಯರವರಿಗೆ ಸ.ನಂ.95/3 ರಲ್ಲಿ 29 ವರೆ ಗುಂಟೆ ಜಮೀನು ಅವರ ಹೆಸರಿಗೆ ಮ್ಯೂಟೇಶನ್ ಆಗಿದೆ ಎಂದರೆ ಸರಿ. ಪ್ರತಿವಾದಿ ತನ್ನ ಹೆಸರಿಗೆ ಬಂದಿದ್ದ 1 ಎಕರೆ 37 ಗುಂಟೆ ಜಮೀನನ್ನು ಅಳತೆ ಮಾಡಿಸಿ ಅದರಲ್ಲಿ 29 ವರೆ ಗುಂಟೆ ಜಮೀನನ್ನು ಸಿದ್ದರಾಮಯ್ಯನಿಗೆ ಮಾರಾಟ ಮಾಡಿ ಇನ್ನು ಉಳಿದ 1 ಎಕರೆ 7 ವರೆ ಗುಂಟೆ ಜಮೀನು ಪ್ರತಿವಾದಿಯ ಹೆಸರಿಗೆ ಖಾತೆ ಪಹಣಿ ಇದೆ ಎಂದರೆ ಸರಿಯಲ್ಲ. ನೀವೆ ಹಾಜರುಪಡಿಸಿರುವ ನಿಪಿ.4 ದಾಖಲೆಯಲ್ಲಿರುವ ಮಾಹಿತಿ ಸರಿಯಿದೆ ಎಂದರೆ ಹೌದು ಸರಿಯಿದೆ ಎನ್ನುತ್ತಾರೆ. ಸಾಮಾನ್ಯವಾಗಿ ಸರ್ವೆ ಇಲಾಖೆಯವರು ಪೋಡಿ ಮಾಡಬೇಕಾದರೆ ಸಂಬಂಧ ಪಟ್ಟ ಜಮೀನನ್ನು ಅಳತೆ ಮಾಡಿ ಪೋಡಿ ಮಾಡುತ್ತಾರೆ ಎಂದರೆ ಸರಿ. ನಿಪಿ.5 ಕ್ರಯ ಪತ್ರದಲ್ಲಿ 29 ವರೆ ಗುಂಟೆ ಜಮೀನಿಗೆ ಪೂರ್ವಕ್ಕೆ –ನನ್ನ ಬಾಬ್ತು ಉಳಿಕೆ ಜಮೀನಿಗೆ ಹೋಗಿ ಬರಲು ಬಿಟ್ಟುಕೊಂಡಿರುವ ನನ್ನ ಬಾಬ್ತು ಸ್ವತ್ತು ಎಂದು ಬರೆದಿದೆ ಎಂದರೆ ಸರಿಯಲ್ಲ. ಅದೇ ರೀತಿ ಸದರಿ ಕ್ರಯ ಪತ್ರದಲ್ಲಿ ಸ್ವತ್ತಿನ ಉತ್ತರಕ್ಕೆ– ನನ್ನ ಬಾಬ್ತು ಉಳಿಕೆ ಜಮೀನಿಗೆ ಹೋಗಿ ಬರಲು ಬಿಟ್ಟುಕೊಂಡಿರುವ ನನ್ನ ಬಾಬ್ತು ಸ್ವತ್ತು ಎಂದು ಬರೆದಿದೆ ಎಂದರೆ ಸರಿಯಲ್ಲ. ನಿಪಿ.5 ಕ್ರಯ ಪತ್ರದಲ್ಲಿ ಚಕ್ಕುಬಂದಿಯನ್ನು ತಪ್ಪಾಗಿ ನಮೂದು ಮಾಡಿದ್ದಾರೆ ಎಂದು ಹೇಳಿ ನೀವೇನಾದರೂ ಯಾವುದಾದರೂ ನ್ಯಾಯಾಲಯದಲ್ಲಿ ದಾವೆ ಹಾಕಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಪಿ.5 ರಲ್ಲಿ ಬರೆಸಿರುವ ಚಕ್ಕುಬಂದಿ ಸರಿಯಾಗಿ ಇರುವುದರಿಂದ ನಾನು ಅದನ್ನು ಎಲ್ಲಿಯೂ ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ. ಸಿದ್ದರಾಮಯ್ಯನಿಗೆ ಮಾರಾಟ ಮಾಡಿರುವ 29 ವರೆ ಗುಂಟೆ ಜಮೀನಿನ ಪಶ್ಚಿಮಕ್ಕೆ ಪ್ರತಿವಾದಿಯ ಉಳಿಕೆ ಜಮೀನು ಇದೆ ಎಂದರೆ ಸರಿ. ಪ್ರತಿವಾದಿ ತನ್ನ ಉಳಿಕೆ ಜಮೀನಿಗೆ ಹೋಗಲ ಸಿದ್ದರಾಮಯ್ಯರವರ ಜಮೀನಿನ ಉತ್ತರ ದಿಕ್ಕಿನಲ್ಲಿ ದಾರಿ ಬಿಟ್ಟುಕೊಂಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ದಾವಾಸ್ವತ್ತಿನ ಬಾಬ್ತು

ಒಂದು ಛಾಯ ಚಿತ್ರವನ್ನು ತೋರಿಸಿ ಈ ಛಾಯ ಚಿತ್ರದಲ್ಲಿ ಕಾಣುವ ರಸ್ತೆಯು ಪೂರ್ವದಿಂದ ಪಶ್ಚಿಮಕ್ಕೆ ಇರುವ ರಸ್ತೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಇಲ್ಲ ಅದು ನನ್ನ ಇಡುವಳಿ ಜಮೀನು ಎಂದು ಉತ್ತರಿಸಿರುತ್ತಾರೆ. ಸದರಿ ಪೋಟೋನಲ್ಲಿ ಕಾಣುವ ದಾರಿಯ ದಕ್ಷಿಣಕ್ಕೆ ಇರುವ ತೋಟ ಯಾರದ್ದು ಎಂದರೆ ಸಾಕ್ಷಿಯು ಅದು ಸಿದ್ದರಾಮಯ್ಯರವರ ತೋಟ ಎನ್ನುತ್ತಾರೆ. ಸದರಿ ಪೋಟೋವನ್ನು ನಿಡಿ.1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ಪೋಟೋ ತೋರಿಸಿ ಸದರಿ ಪೋಟೊದಲ್ಲಿ ಕಾಣುವ ನೀಲಿ ಬಣ್ಣದ ಮನೆ ನಿಮ್ಮದು ಎಂದರೆ ಸಾಕ್ಷಿ ಹೌದು ಆ ಮನೆ ನಮ್ಮದು ಎನ್ನುತ್ತಾರೆ. ಸದರಿ ಪೋಟೋವನ್ನು ನಿಡಿ.2 ಎಂದು ಗುರುತಿಸಲಾಯಿತು. ನಿಡಿ.2 ಪೋಟೋದಲ್ಲಿ ಕಾಣುವ ರಸ್ತೆ ಸದರಿ ವಿಭಾಗ ಪತ್ರದಂತೆ ಪ್ರತಿವಾದಿ ಜಮೀನಿಂದ ನನ್ನ ಮನೆಗೆ ಹೋಗಲು ಬಿಟ್ಟುಕೊಂಡಿರುವ ರಸ್ತೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ನನ್ನ ಇಡುವಳಿ ಜಮೀನು ಎನ್ನುತ್ತಾರೆ. ನಿಡಿ.2 ರಲ್ಲಿ ಕಾಣುವ ರಸ್ತೆಯ ಪಶ್ಚಿಮಕ್ಕೆ ಇರುವ ಜಮೀನನ್ನು ಪ್ರತಿವಾದಿ ಸಿದ್ದರಾಮಯ್ಯರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯವಕಾಶ ಕೋರಿದ್ದು ಸಮಯವಕಾಶ ನೀಡಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**
**ಗುಬ್ಬಿ.**

Pw.3 present. L/c for D1 to 4 cross examined Pw.3 fully and closed his side.

Pw.2 absent. Plaintiff present and prays time to keep Pw.2 present to tender for cross examination.

Prayer allowed on cost of Rs.200/- and as last chance.

Call on.04.06.25

Dw1 present he is cross examined by defendant counsel fully .

Defendant counsel prays time for cross of Pw2.

Call on.25.11.2024.